2) **ಹುಡ್ಕೋ 1ನೇ ಹಂತ** : ಈ ಹಂತದಲ್ಲಿ 125 ಮನೆಗಳನ್ನು ಕಟ್ಟಿಲಾಗಿದ್ದು 54 ಮನೆಗಳ ಹಂಚಿಕೆ ಮಾಡಲಾಗಿದೆ. ಅವುಗಳೆಂದರೆ ಇಡಬ್ಲ್ಯೂಎಸ್ 01 ಎಲಐಜಿ -2ಎ 11, ಎಲಐಜಿ 2ಬಿ 09, ಎಂಐಜಿ 1.11. ಎಂಐಜಿ-1-16 ಮತ್ತು ಹೆಚಐಜಿ-06.

ಹಾಲಿ ಕರ್ನಾಟಕ ಗೃಹ ಮಂಡಳಿಯಲ್ಲಿ 5 ಅರ್ಜಿಗಳು ಹೆಚಐಜಿ ಮನೆಗಳಿಗೂ, 3 ಅರ್ಜಿಗಳು ಎಂಐಜಿ 1 ಮನೆಗಳಿಗೂ 2 ಅರ್ಜಿಗಳು ಎಂಐಜಿ-2 ಮನೆಗಳಿಗೂ 6 ಅರ್ಜಿಗಳು ಎಲಐಜಿ.-2ಎ ಮನೆಗಳಿಗೂ ಸಲ್ಲಿಸಿದ್ದು ಅವುಗಳನ್ನು ಪರಿಶೀಲಿಸಿ ಅರ್ಹತೆಯ ಆದಾರದ ಮೇಲೆ ಖಾಲಿ ಇರುವ ಮನೆಗಳನ್ನು ಹಂಚಿಕೆ ಮಾಡಲು ಜರೂರು ಕ್ರಮ ಕೈಗೊಳ್ಳಬೇಕಾಗಿದೆ.

3. **ಹುಡ್ಕೋ 2ನೇ ಹಂತ** : ಈ ಹಂತದಲ್ಲಿ 67 ಮನೆಗಳ ನಿರ್ಮಾಣರು ತಳಪಾಯ ಹಂತದಲ್ಲಿದೆ ಮತ್ತು ಈ ಮನೆಗಳನ್ನು ಇನ್ನೂ ಹಂಚಿಕೆ ಮಾಡಿರುವುದಿಲ್ಲ ಹಾಗೂ ಅರ್ಜಿಗಳನ್ನು ಕರೆಯಲು ಯಾವುದೇ ಅಧಿಸೂಚನೆಯನ್ನು ಹೊರಡಿಸಿರುವುದಿಲ್ಲ.

ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನ ಪರಿಷತ್ತು ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118 ರ ಮೇರೆಗೆ ದಿನಾಂಕ 14ನೇ ಸೆಪ್ಟೆಂಬರ್ 1995ರಂದು ಕರ್ನಾಟಕ ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಿತೆಂದು ತಿಳಿಸುತ್ತೇನೆ.

1. ಕರ್ನಾಟಕ ನೀರಾವರಿ ಪೂರೋಭಿವೃದ್ಧಿ ಮತ್ತು ವಂತಿಕೆ ಮತ್ತು ನೀರಿನ ದರ ವಿಧಿಸುವ 2ನೇ ತಿದ್ದುಪಡಿ ವಿಧೇಯಕ 1995.

2. ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ ಪಕ್ಷಾಂತರ ನಿಷೇದ 2ನೇ ತಿದ್ದುಪಡಿ ವಿಧೇಯಕ 1995.

3. ಕರ್ನಾಟಕ ಪುರಸಭೆಗಳ ತಿದ್ದುಪಡಿ ವಿಧೇಯಕ 1995.

ವರದಿಗಳನ್ನೊಪ್ಪಿಸುವುದು

ಶ್ರೀ ವೈಜನಾಥ್ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, "ನಾನು ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಮಂಡಿಸುತ್ತೇನೆ"

ಶ್ರೀವಾಸುದೇವನ್‌ರವರಿಗೆ ಸರ್ವೋಚ್ಚ ನ್ಯಾಯಾಲಯ ಜೈಲು ಶಿಕ್ಷೆ ವಿಧಿಸಿರುವ ಬಗ್ಗೆ

+ಶ್ರೀ ಬಿ.ಎಸ್. ಯಡಿಯೂರಪ್ಪ : ನಿನ್ನೆ ದಿವಸ ತಮ್ಮ ಸಮಕ್ಷಮದಲ್ಲಿಯೇ, ಪ್ರಶ್ನೋತ್ತರ ವೇಳೆ ಆದ ತಕ್ಷಣ, ಬೇರೆ ಯಾವುದೇ ಕಲಾಪ ತೆಗೆದುಕೊಳ್ಳದೇ ನಮ್ಮ ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಿದ್ದೆವು.